SEPTEMBER 2023
ವಿತ್ತ ಸಂಚಿಕೆ

# INSPIRE INDIA



**ಸಲಹೆ ನಮ್ಮದು ಹೂಡಿಕೆ ನಿಮ್ಮದು**

ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com




ಬುಸಿನೆಸ್‌ನಲ್ಲಿ ಮತ್ತೆ ಮತ್ತೆ ಅವಕಾಶಗಳು ಬರುತ್ತಲೇ ಇರುತ್ತವೆ. ಇದು ಬಸ್‌ಗಳಂತೆ. ಒಂದು ತಪ್ಪಿದರೆ ಇನ್ನೊಂದು ಬರುತ್ತಿರುತ್ತದೆ.

–ರಿಚರ್ಡ್ ಬ್ರಾಸನ್



ಜೀವನದಲ್ಲಿ ನೀವು ಹತ್ತಾರು ತಪ್ಪುಗಳನ್ನು ಮಾಡಿದ ಬಳಿಕವಷ್ಟೇ ಕೆಲವೇ ಕೆಲವು ಸರಿಯಾದ ಕೆಲಸಗಳನ್ನು ಮಾಡಲು ಸಾಧ್ಯ.

–ವಾರೆನ್ ಬಫೆಟ್



ಜೀವನದಲ್ಲಿ ವೈಫಲ್ಯವನ್ನು ಅನುಭವಿಸಿದವರಿಗೆ ತಾವು ನಿಜವಾಗಿ ಯಶಸ್ಸಿನ ಎಷ್ಟು ಸನಿಹಕ್ಕೆ ಬಂದಿದ್ದೇವೆ ಎನ್ನುವುದು ತಿಳಿದಿರುವುದಿಲ್ಲ.

–ಥಾಮಸ್ ಎಡಿಸನ್



# ಎಸ್‌ಐಪಿ ಟಾಪ್‌ಅಪ್

## ಸಂಪತ್ತು ಸೃಷ್ಟಿಯ ಹಿಂದಿನ ರಹಸ್ಯ



ಜಗತ್ತು ನಾಗಾಲೋಟದಲ್ಲಿ ಓಡುತ್ತಿರುತ್ತದೆ. ಇಂತಹ ಓಟದಲ್ಲಿ ಸಮಯ ಅತ್ಯಂತ ಮಹತ್ವದ್ದು. ದಿನ ಕಳೆಯುತ್ತಿದ್ದಂತೆ ಹಣಕಾಸಿನ ಜವಾಬ್ದಾರಿಗಳು ಹೆಚ್ಚುತ್ತಲೇ ಇರುತ್ತವೆ. ಇದಕ್ಕೆ ತಕ್ಕುನಾಗಿ ಹೂಡಿಕೆಯ ದಾರಿಗಳನ್ನು ಕಂಡುಕೊಳ್ಳುವುದು ಅತ್ಯಂತ ಮಹತ್ವದ್ದು. ನಿಮ್ಮ ಜೀವನದ ದಿಕ್ಕನ್ನು ಬದಲಿಸುವ ನಿಟ್ಟಿನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ (SIP)ಯನ್ನು ಅದರ ಟಾಪ್–ಅಪ್‌ನೊಂದಿಗೆ ಆಯ್ಕೆ ಮಾಡಿಕೊಂಡರೆ ಅದು ಬದಲಾಗುತ್ತಿರುವ ಜೀವನದ ಶೈಲಿಯ ಜೊತೆಗೆ ಹಣದುಬ್ಬರದ ಪ್ರಭಾವಕ್ಕೆ ಒಳಗಾಗಿ ನಿಮ್ಮ ಸಂಪತ್ತು ಕರಗದಂತೆ ರಕ್ಷಣೆಯನ್ನು ನೀಡುತ್ತದೆ.

ಮಾರುಕಟ್ಟೆಯ ಮೇಲೆ ನಿರಂತರವಾಗಿ ಕಣ್ಣಿಟ್ಟು ಕಾಯುವುದು ಮತ್ತು ಅದಕ್ಕೆ ತಕ್ಕಂತೆ ನಿಮ್ಮ ಹೂಡಿಕೆ ಯೋಜನೆಗಳನ್ನು ಹೊಂದಿಸುವ ದಿನಗಳೆಲ್ಲ ಮುಗಿದು ಹೋದವು. ಈಗ ಎಸ್‌ಐಪಿಗಳೆಲ್ಲ ಸಂಪೂರ್ಣ ಸ್ವಯಂಚಾಲಿತ. ಸಂಪತ್ತು ಕ್ರೋಢೀಕರಿಸಲು ಮತ್ತು ಕ್ರಮೇಣ ಅದನ್ನು ಬೆಳೆಸಲು ನಿರಂತರ ಮೇಲ್ವಿಚಾರಣೆಯ ಅಗತ್ಯವಿರುವುದಿಲ್ಲ. ನಿಮ್ಮ ಆದಾಯವು ಬೆಳೆಯುತ್ತಿದ್ದಂತೆ ಹೂಡಿಕೆಗೆ ಚಾಲನೆಯನ್ನು ನೀಡಬಹುದು. ಇದರಿಂದ ನಿಮ್ಮ ಸಂಪತ್ತು ಶ್ರಮವೇ ಇಲ್ಲದೇ ಬೆಳೆಯುತ್ತ ಹೋಗುತ್ತದೆ.

ಎಸ್‌ಐಪಿಯ ಟಾಪ್‌ಅಪ್ ಮಾಡಿಕೊಂಡರೆ ನಿಯಮಿತವಾಗಿ ನಿಮ್ಮ ಟಾಪ್‌ಅಪ್‌ಗೆ ಸೇರ್ಪಡೆ ಮಾಡುತ್ತ ಹೋದಂತೆ ಮತ್ತು ಕಂಪೌಂಡಿಂಗ್ ಸಾಮರ್ಥ್ಯದ ಬಲದಿಂದಾಗಿ ನಿಮ್ಮ ಹೂಡಿಕೆ ಬೆಳೆಯುವುದು ಕೂಡ ಸುಲಭವಾಗುತ್ತದೆ. ಸಕ್ರಿಯವಾಗಿ ಪಾಲ್ಗೊಳ್ಳದೇ ಹಣಕಾಸಿನ ಸ್ವಾತಂತ್ರ್ಯವನ್ನು ಸಾಧಿಸಲು ಮತ್ತು ಸುಸ್ಥಿರ ಸಂಪತ್ತನ್ನು ಬೆಳೆಸುವ ರಹಸ್ಯವನ್ನು ಸಾಧಿಸಬಹುದು. ಅತ್ಯಂತ ಸರಳವಾಗಿದ್ದರೂ ಅಷ್ಟೇ ಕ್ರಾಂತಿಕಾರಿಯಾದ ಚಿಂತನೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ಎಸ್‌ಐಪಿ ಟಾಪ್‌ಅಪ್‌ನೊಂದಿಗೆ ಕೆಲವು ಅಂಶಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಸೋಣ.

1.ಸ್ವಯಂಚಾಲನೆ ಶಿಸ್ತಿಗೆ ದಾರಿ: ಎಸ್‌ಐಪಿ ಟಾಪ್‌ಅಪ್ ಬಳಕೆದಾರ ಸ್ನೇಹಿ ಕಾರ್ಯತಂತ್ರವಾಗಿದ್ದು ಇದು ಸ್ವಯಂಚಾಲನೆಯ ಮೂಲಕ ನಿರಂತರ ಮತ್ತು ನಿರ್ದಿಷ್ಟ ವಿಧಾನದ ಹೂಡಿಕೆಗೆ ಉತ್ತೇಜನ ನೀಡುತ್ತದೆ. ಇದರಿಂದಾಗಿ ಮಾರುಕಟ್ಟೆಯ ಸಮಯ ಅಥವಾ ಆಗಾಗ ಮಾರ್ಪಾಡು ಮಾಡುವ ತಲೆನೋವುಗಳಿಲ್ಲದೇ ಹೂಡಿಕೆಗಳನ್ನು ಬೆಳೆಸುವ ಅಭ್ಯಾಸವನ್ನು ರೂಢಿಸಿಕೊಳ್ಳಲು ಜನರಿಗೆ ಸಹಾಯ ಮಾಡುತ್ತದೆ.

ಒಳ ಪುಟ ನೋಟ

ಅಗತ್ಯಕ್ಕೆ ತಕ್ಕ ಹೂಡಿಕೆ.... 3



ವಿಮಾ ಪಾಲಿಸಿಯ ದೂರುಗಳು 5



ರಿಸ್ಕ್‌ನ್ನು ತಡೆದುಕೊಳ್ಳುವ ಶಕ್ತಿ, ಹೂಡಿಕೆಯ ಆಯಾಮ ಮತ್ತು ಹಣಕಾಸಿನ ಉದ್ದೇಶಗಳ ಆಧಾರದಲ್ಲಿ ಸೂಕ್ತ ಮ್ಯುಚ್ಯುಯಲ್ ಫಂಡ್ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಹೀಗೆ ಸ್ವಯಂಚಾಲನೆಯನ್ನು ಹೊಂದಿರುವುದರಿಂದ ನಿಮ್ಮ ಹೂಡಿಕೆಯು ಕ್ರಮೇಣ ಕಾಲಕ್ಕೆ ತಕ್ಕಂತೆ ಏರಿಕೆ ಕಾಣುತ್ತ ಹೋಗುತ್ತದೆ. ಸಾಮಾನ್ಯವಾಗಿ ಜನರು ಎಸ್‌ಐಪಿಗಳನ್ನು ಆರಂಭಿಸಿ ವರ್ಷಗಳ ಕಾಲ ಅದರ ಕಡೆಗೆ ಕಣ್ಣು ಕೂಡ ಹಾಯಿಸದೇ ಇದ್ದು ಬಿಡುತ್ತಾರೆ. ಇದರಿಂದ ಪ್ರತಿ ವರ್ಷ ಅತ್ಯಂತ



**ಟಾಪ್‌ಅಪ್‌ನೊಂದಿಗೆ ಎಸ್‌ಐಪಿಗೆ ನಿರ್ಧಾರ ಮಾಡಿದರೆ ಅದನ್ನು ಸಾಧ್ಯವಾದಷ್ಟು ಆರಂಭದಲ್ಲಿಯೇ ಮಾಡಬೇಕು, ನಿರಂತರತೆಯನ್ನು ಕಾಯ್ದುಕೊಳ್ಳಬೇಕು ಮತ್ತು ಸುದೀರ್ಘ ಅವಧಿಯ ಹೂಡಿಕೆ ಮಾಡಬೇಕು.**

ಕಡಿಮೆ ಉಳಿತಾಯ ಮಾಡಿದಂತಾಗುತ್ತದೆ. ಇದಕ್ಕೆ ಹಣದುಬ್ಬರ ಮತ್ತು ನಿಮ್ಮ ಆದಾಯದ ಶೇಕಡಾವಾರು ಪ್ರಮಾಣ ಕೂಡ ಕಾರಣ. ಪ್ರತಿವರ್ಷ ಹಣದುಬ್ಬರ ಸಂಖ್ಯೆಗಳಿಗೆ ಹೊಂದಾಣಿಕೆಯಾಗುವ ಹಾಗೆ ಎಸ್‌ಐಪಿಯಲ್ಲಿ ಏರಿಕೆ ಮಾಡಬೇಕು. ಅದರಿಂದ ಮಾತ್ರ ಆದಾಯದ ಮಟ್ಟ ಮತ್ತು ಜೀವನದ ಗುಣಮಟ್ಟದಲ್ಲಿನ ಬದಲಾವಣೆಗೆ ತಕ್ಕಂತೆ ಹೊಂದಾಣಿಕೆ ಸಾಧ್ಯವಾಗುತ್ತದೆ.

2. ಸಂಪತ್ತಿನ ಸೌಧದ ತ್ವರಿತ ನಿರ್ಮಾಣ ಸಾಧ್ಯ: ಟಾಪ್‌ಅಪ್ ಸೌಲಭ್ಯದೊಂದಿಗೆ ನಿಮ್ಮ ಎಸ್‌ಐಪಿಗಳನ್ನು ಹೆಚ್ಚಿಸುವುದರಿಂದ ಸಂಪತ್ತಿನ ಬೆಳವಣಿಗೆಯನ್ನು ಸುಧಾರಿಸಲು ಸಹಾಯವಾಗುತ್ತದೆ. ಜೊತೆಗೆ ಹಣಕಾಸು ಉದ್ದೇಶಗಳೊಂದಿಗೆ ನಿಮ್ಮ ಸಂಪತ್ತು ಸೃಷ್ಟಿಯ ಪಯಣವನ್ನು ತ್ವರಿತಗೊಳಿಸುತ್ತದೆ ಕೂಡ. ಇಂತಹ ಒಂದು ಸಶಕ್ತವಾದ ಕಾರ್ಯತಂತ್ರದಿಂದ ವ್ಯವಸ್ಥಿತ ಹೂಡಿಕೆ, ಕಂಪೌಂಡಿಂಗ್ ಮತ್ತು ಉಳಿತಾಯದಲ್ಲಿ ಸ್ವಯಂಚಾಲಿತ ಏರಿಕೆ ಸಾಧ್ಯ. ಇದು ನಿಮ್ಮ ಹಣ ಅನೇಕ ಸ್ತರಗಳಲ್ಲಿ ಬೆಳವಣಿಗೆ ಕಾಣಲು ಸಹಾಯ ಮಾಡುತ್ತದೆ. ಮಾರುಕಟ್ಟೆಯ ಆದಾಯ ಶೇ.12ರಷ್ಟಿದೆ ಎಂಬ ಊಹೆಯೊಂದಿಗೆ ಸಾಮಾನ್ಯ ಎಸ್‌ಐಪಿ ಜೊತೆ ಹೋಲಿಕೆ ಮಾಡಿ ಎಸ್‌ಐಪಿ ಟಾಪ್‌ಅಪ್‌ನ ಶಕ್ತಿ ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳೋಣ:

| ಸಂಪತ್ತಿನ ಸೃಷ್ಟಿ | 10000 ರೂ.ಗಳ ಸಾಮಾನ್ಯ/ನಿಶ್ಚಿತ ಎಸ್‌ಐಪಿ | 1000 ರೂ. ಗಳ ಟಾಪ್‌ಅಪ್ ಎಸ್‌ಐಪಿ | 2000 ರೂ. ಗಳ ಟಾಪ್‌ಅಪ್ ಎಸ್‌ಐಪಿ |
|---|---|---|---|
| 10 ವರ್ಷಗಳಲ್ಲಿ | ರೂ.22.40 ಲಕ್ಷ | ರೂ.30.43 ಲಕ್ಷ | ರೂ.38.47 ಲಕ್ಷ |
| 20 ವರ್ಷಗಳಲ್ಲಿ | ರೂ.91.99 ಲಕ್ಷ | ರೂ.1.47 ಕೋಟಿ | ರೂ.2.03 ಕೋಟಿ |
| 30 ವರ್ಷಗಳಲ್ಲಿ | ರೂ.03.09 ಲಕ್ಷ | ರೂ.5.33 ಕೋಟಿ | ರೂ.7.58 ಕೋಟಿ |

3. ಹಣಕಾಸು ಗುರಿಗಳನ್ನು ತಲುಪಲು ಸಹಾಯ: ಸರಳ ಎಸ್‌ಐಪಿಗಳಿಗೆ ನಿಮ್ಮ ಹಣಕಾಸು ಗುರಿಯನ್ನು ತುಲನೆ ಮಾಡಿದಾಗ ನಿಮ್ಮ ಹಣಕಾಸು ಉದ್ದೇಶಗಳನ್ನು ತ್ವರಿತವಾಗಿ ಸಾಧಿಸಲು ಎಸ್‌ಐಪಿ ಟಾಪ್‌ಅಪ್ ಹೆಚ್ಚು ಪ್ರಯೋಜನಕಾರಿ. ಒಂದು ನಿರ್ದಿಷ್ಟ ಉದ್ದೇಶವನ್ನು ಹೊಂದಿದ ಅಥವಾ ಗುರಿಯನ್ನು ಹೊಂದಿದ ಹೂಡಿಕೆ ಕಾರ್ಯತಂತ್ರವಾಗಿದ್ದರೆ ಈ ಉದ್ದೇಶಗಳೊಂದಿಗೆ ನಿಮ್ಮ ಎಸ್‌ಐಪಿ ಹೂಡಿಕೆಗಳನ್ನು ಹೋಲಿಕೆ ಮಾಡುವಂತೆ ಅದು ಉತ್ತೇಜನ ನೀಡುತ್ತದೆ. ಕಂಪೌಂಡಿಂಗ್ ಅಥವಾ ಸಂಯೋಜನೆಯ ಪ್ರಯೋಜನದೊಂದಿಗೆ ಸೂಕ್ತ ಯೋಜನೆ ಮತ್ತು ಅಗತ್ಯವಿರುವ ಎಸ್‌ಐಪಿ ಟಾಪ್‌ಅಪ್‌ಗಳನ್ನು ಗುರುತಿಸಿದರೆ ಸಾಧಿಸಲು ಅಸಾಧ್ಯವೆನಿಸಿದ್ದು ಕೂಡ ಅಚ್ಚರಿದಾಯಕ ರೀತಿಯಲ್ಲಿ ಸಾಧ್ಯವಾಗುತ್ತ ಹೋಗುತ್ತದೆ. ಸರಳ ಎಸ್‌ಐಪಿ ಸಾಕು ಎಂದು ಅನಿಸಿದರೂ ಕೂಡ ಎಸ್‌ಐಪಿ ಟಾಪ್‌ಅಪ್ ಹೆಚ್ಚಿನ ಕಂಫರ್ಟ್‌ನ್ನು ಒದಗಿಸುತ್ತದೆ. ಇದರ ಜೊತೆಗೆ ನಿಮ್ಮ ಗುರಿ ಇನ್ನೂ ನಿಗದಿಯಾಗದೇ ಇದ್ದ ಅವಧಿಯಲ್ಲಿಯೂ ಕೂಡ ನಿಮ್ಮ ಆಕಾಂಕ್ಷೆಗಳನ್ನು ಹಾಗೂ ಜೀವನ ಗುಣಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಹದಿನೈದು ವರ್ಷಗಳ ನಂತರ ಅವಧಿ ಪೂರ್ಣಗೊಳ್ಳುವ ಎರಡು ಕೋಟಿ ರೂ. ಉನ್ನತ ಶಿಕ್ಷಣ ಗುರಿ ನಮಗಿದೆ ಎಂಬ ಉದಾಹರಣೆಯೊಂದಿಗೆ ಈಗ ಇದನ್ನು ಪರಿಗಣಿಸೋಣ. ಈಗ ಶೇ.12ರ ಮಾರುಕಟ್ಟೆ ಆದಾಯದ ಊಹೆಯೊಂದಿಗೆ ಸಾಮಾನ್ಯ/ನಿಶ್ಚಿತ ಎಸ್‌ಐಪಿ ಮೊತ್ತ ಬೇಕಾಗಿರುವುದು ಪ್ರತಿ ತಿಂಗಳಿಗೆ 42,000 ರೂ. ಆದರೆ ಒಂದು ವೇಳೆ ಪ್ರತಿ ವರ್ಷ 5000 ರೂ. ಗಳೊಂದಿಗೆ ಎಸ್‌ಐಪಿಯನ್ನು ಹೆಚ್ಚಿಸಲು ನಿರ್ಧರಿಸಿದರೆ ಆಗ ಮೊದಲ ವರ್ಷದ ಅಗತ್ಯವಿರುವ ಎಸ್‌ಐಪಿ ಮೊತ್ತವು ಸುಮಾರು 17000ಕ್ಕೆ ಇಳಿಯುತ್ತದೆ. ಇದರಿಂದಾಗಿ ಎಸ್‌ಐಪಿ ಟಾಪ್‌ಅಪ್‌ನೊಂದಿಗೆ ಇದು ಸಾಧ್ಯ

ಈಗ ಒಬ್ಬ ವ್ಯಕ್ತಿಯು ಪ್ರತಿ ತಿಂಗಳು 42000 ರೂ. ಉಳಿತಾಯ ಮಾಡುವ ಸಾಮರ್ಥ್ಯದ ಜೊತೆಗೆ ಪ್ರತಿವರ್ಷ 5000 ರೂ. ಟಾಪ್‌ಅಪ್ ಕೂಡ ಮಾಡಲು ಸಾಧ್ಯವಾಗುವುದದಾದರೆ” ಅಂತಹ ಸನ್ನಿವೇಶದಲ್ಲಿ ಹದಿನೈದು ವರ್ಷಗಳ ಬಳಿಕ ಸೃಷ್ಟಿಯಾದ ಸಂಪತ್ತು 3.18 ಕೋಟಿಗೂ ಅಧಿಕ. ಇದರಿಂದ ಉನ್ನತ ಶಿಕ್ಷಣವನ್ನು ಉತ್ತಮ ಕಾಲೇಜಿನಲ್ಲಿ ಮಾಡಲು ಅವಕಾಶವಾಗುತ್ತದೆ. ಅಂದರೆ ನೀವು ಹೊಂದಿದ್ದ ಎರಡು ಕೋಟಿ ರೂ.ಗಳ ಮೂಲ ಗುರಿಯನ್ನು ಮೂರು ವರ್ಷ ಮೊದಲೇ ಸಾಧಿಸಿದಂತಾಗುತ್ತದೆ.

**ಬಾಟಮ್ ಲೈನ್:** ಟಾಪ್‌ಅಪ್‌ನೊಂದಿಗೆ ಎಸ್‌ಐಪಿಗೆ ನಿರ್ಧಾರ ಮಾಡಿದರೆ ಅದನ್ನು ಸಾಧ್ಯವಾದಷ್ಟು ಆರಂಭದಲ್ಲಿಯೇ ಮಾಡಬೇಕು, ನಿರಂತರತೆಯನ್ನು ಕಾಯ್ದುಕೊಳ್ಳಬೇಕು ಮತ್ತು ಸುದೀರ್ಘ ಅವಧಿಯ ಹೂಡಿಕೆ ಮಾಡಬೇಕು. ಇಂತಹ ಒಂದು ಸರಳ ನಿಯಮದಿಂದ ಪ್ರತಿ ಎಸ್‌ಐಪಿಯನ್ನು ಟಾಪ್‌ಅಪ್ ಎಸ್‌ಐಪಿಯೊಂದಿಗೆ ಯೋಚಿಸಬೇಕು. ನಾವಿಲ್ಲಿ ಉದಾಹರಣೆಯೊಂದಿಗೆ ನೋಡಿದ ಹಾಗೆ ಟಾಪ್‌ಅಪ್ ಎಸ್‌ಐಪಿಗಳು ನಿಮ್ಮ ಹಣಕಾಸು ಜರ್ನಿಯನ್ನೇ ಬದಲಿಸಿಬಿಡುವ ಸಾಮರ್ಥ್ಯವನ್ನು ಹೊಂದಿದೆ. ನಿಮ್ಮ ಹಣಕಾಸು ಉದ್ದೇಶಗಳನ್ನು ತಕ್ಕಮಟ್ಟಿನ ಶಿಸ್ತಿನಿಂದ ಮಾಡಿದರೆ ಇವೆಲ್ಲವನ್ನೂ ಸಾಧಿಸಲು ಸಾಧ್ಯವಾಗುತ್ತದೆ.

ನೀವು ನಿಮಗಾಗಿ ನಿಗದಿಮಾಡಿಕೊಂಡ ಹಣಕಾಸು ಗುರಿಗಳನ್ನು ಸಾಧಿಸಲು ಬೇಕಾದ ಅಗತ್ಯ ಸವಲತ್ತುಗಳು ನಿಮ್ಮ ಬಳಿ ಇದೆ ಎನ್ನುವುದು ಅರಿವಾದರೆ ಹೆಚ್ಚು ಸುರಕ್ಷತೆಯ ಅನುಭವವಾಗುತ್ತದೆ. ಇದು ನಿಮ್ಮ ಪಾಲಿನ ಹೆಮ್ಮೆಯೂ ಹೌದು.

# ಅಗತ್ಯಕ್ಕೆ ತಕ್ಕ ಹೂಡಿಕೆ

# ಹಣಕಾಸು ಗುರಿಗೆ ದಿಕ್ಕು




ನಾವು ಜೀವನದಲ್ಲಿ ಹಾಕಿಕೊಂಡ ಎಲ್ಲ ಗುರಿಗಳನ್ನು ಸಾಧಿಸಲು ಸಾಧ್ಯವಿದೆಯೇ? ಉಳಿದೆಲ್ಲ ಗುರಿಗಳ ಮಾತು ಬಿಟ್ಟುಬಿಡಿ, ನಾವು ಹಾಕಿಕೊಂಡ ಹಣಕಾಸು ಗುರಿಗಳ ಬೆಳೆಯುತ್ತಿರುವ ಪಟ್ಟಿಯನ್ನು ಒಮ್ಮೆ ನೋಡಿ. ಇದನ್ನು ನಾವು ನಮ್ಮ ಹೂಡಿಕೆಗಳ ಮೂಲಕ ಸಾಧಿಸಬೇಕಾಗಿದೆ. ನಮ್ಮ ಬೇಕು-ಬೇಡಗಳನ್ನು ಪೂರ್ತಿಗೊಳಿಸಲು ಹಣದ ದೊಡ್ಡ ಗಂಟೇ ಅಗತ್ಯವಿದೆ ಎಂಬ ಸತ್ಯ ಗೊತ್ತಿದ್ದರೂ ಕೂಡ ಅದನ್ನು ಸಾಕಾರಗೊಳಿಸಲು ಯಾವುದೇ ಕ್ರಮವನ್ನು ಕೈಗೊಳ್ಳುವುದಿಲ್ಲ. ನಮ್ಮಲ್ಲಿ ಅನೇಕರು ಈ ಗುರಿಗಳನ್ನು ಸಾಧಿಸಲು ಅಗತ್ಯವಾದ ಉಳಿತಾಯ ಮಾಡುವಲ್ಲಿ ಹಿಂದೆ ಬೀಳುತ್ತಾರೆ. ನಾವು ನಿಜಕ್ಕೂ ಗುರಿಗಳನ್ನು ಗುರುತಿಸಿದ್ದೇವೆಯೇ ಮತ್ತು ಅದಕ್ಕಾಗಿ ಎಷ್ಟು ಉಳಿತಾಯ ಮಾಡಬೇಕಾದ ಅಗತ್ಯವಿದೆ ಎಂಬ ಪ್ರಶ್ನೆಗಳನ್ನು ಕೇಳಿಕೊಂಡಿದ್ದೇವೆಯೇ? ದುರಾದೃಷ್ಟದ ಸಂಗತಿ ಏನೆಂದರೆ ನಾವು ನಮ್ಮ ನಿವೃತ್ತಿ, ಮಕ್ಕಳ ಉನ್ನತ ಶಿಕ್ಷಣದಂತಹ ಗುರಿಗಳಿಗಾಗಿ ನಮ್ಮ ಅಮೂಲ್ಯವಾದ ಜೀವನದೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ. ನಾವು ಆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರುವುದಿಲ್ಲ. ಈ ಗುರಿಗಳ ಸುತ್ತ ತಮ್ಮ ಹಣಕಾಸು ಗುರಿಗಳನ್ನು ಗುರುತಿಸಿದವರು ಮತ್ತು ತಮ್ಮ ಹೂಡಿಕೆಗಳನ್ನು ಯೋಜಿಸಿದವರು ಅವುಗಳನ್ನು ಜಾರಿಗೆ ತರುವಲ್ಲಿ ವಿಫಲರಾಗುತ್ತಾರೆ. ಇದರಲ್ಲಿ ಯಾವುದೇ ಸಂದೇಹ ಇಲ್ಲ ಅಲ್ಲವೇ? ಒಂದೇ ರೀತಿಯ ಗುರಿಗಳನ್ನು ಹೊಂದಿದ ಮತ್ತು ಇವತ್ತು ಸಮಾನ ಮೊತ್ತದ ಹಣವನ್ನು ಉಳಿತಾಯ ಮಾಡಿದ ಇಬ್ಬರು ವ್ಯಕ್ತಿಗಳು ಪಡೆದ ಫಲಿತಾಂಶಗಳನ್ನು ತುಲನೆ ಮಾಡಿದಾಗ ನಾವು ಸಾಕಷ್ಟು ಪ್ರಮಾಣದ ವ್ಯತ್ಯಾಸವನ್ನು ಕಾಣಬಹುದು. ಇಲ್ಲಿರುವುದು ತನ್ನ ಗುರಿಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಹೂಡಿಕೆಗಳನ್ನು ಮಾಡಿದವರು ಮತ್ತು ಏನನ್ನೂ ಮಾಡದೇ ಹಾಗೆ ಕುಳಿತವರು. ನಾವು ಹೇಳುವ ಈ ಉದಾಹರಣೆಯಲ್ಲಿ ಇರುವ ಮೊದಲ ವ್ಯಕ್ತಿಯ ಯಶಸ್ಸಿಗೆ ಇರಬಹುದಾದ ಕಾರಣಗಳು ಏನು? ನೋಡೋಣ ಬನ್ನಿ.

1. **ಉದ್ದೇಶಗಳನ್ನು ರೂಪಿಸುವುದು:** ಹಣಕಾಸಿನ ಉದ್ದೇಶಗಳು ವ್ಯಕ್ತಿಯ ಅಥವಾ ಆ ಮನೆಯ ಜೀವನ ಶೈಲಿಯ ಆದ್ಯತೆಗಳು ಹಾಗೂ ಅಗತ್ಯಗಳನ್ನು ನೇರವಾಗಿ ಅವಲಂಬಿಸಿರುತ್ತದೆ. ನಿಮ್ಮ ಹಣಕಾಸು ಅಗತ್ಯಗಳು ನಿಮ್ಮ ಅಪೇಕ್ಷಿತ ಜೀವನಶೈಲಿ ಮತ್ತು ಆದಾಯದ ಮಟ್ಟಗಳೊಂದಿಗೆ ತಳಕು ಹಾಕಿಕೊಂಡಿರಬೇಕು ಎಂಬುದನ್ನು ಪರಿಗಣಿಸುವುದು ಮುಖ್ಯವಾಗುತ್ತದೆ. ನಮ್ಮ ಅಗತ್ಯಗಳು ಎಷ್ಟು ಎಂಬುದನ್ನು ಸಮರ್ಪಕವಾಗಿ ಅಳೆಯುವುದರಿಂದ ಸ್ಪಷ್ಟತೆ ದೊರೆಯುತ್ತದೆ. ಉದಾಹರಣೆಗೆ ನೀವು ಬೇಗ ನಿವೃತ್ತಿ ಹೊಂದುವ ಗುರಿಯನ್ನು ಹೊಂದಿದ್ದರೆ ಅದಕ್ಕೆ ಅಗತ್ಯವಿರುವ ಉಳಿತಾಯದ ಪರಿಮಾಣವನ್ನು ಹಾಗೂ ಸ್ಪಷ್ಟವಾದ ಕಾಲಮಿತಿಯನ್ನು ನಿಗದಿ ಮಾಡಬೇಕಾಗಿರುತ್ತದೆ. ನಮ್ಮ ಜೀವನಶೈಲಿ ಮತ್ತು ಅಗತ್ಯಗಳೊಂದಿಗೆ ಹಣಕಾಸು ಉದ್ದೇಶಗಳನ್ನು ತಳಕುಹಾಕಿಕೊಳ್ಳಲು ಹೊಂದಾಣಿಕೆಯ ಅವಶ್ಯಕತೆ ಇರುತ್ತದೆ. ಈ ಕಾರಣದಿಂದಲೇ ಹಣಕಾಸು ಗುರಿಗಳನ್ನು ಆರಂಭದಲ್ಲಿಯೇ ಗುರುತಿಸಿ ಅದರ ಜಾಡಿ ಹಿಡಿಯುವುದರಿಂದ ನಿಮ್ಮ ನಿಜವಾದ ಅಗತ್ಯಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
2. **ಹೂಡಿಕೆಯ ಸ್ಪಷ್ಟತೆ/ಉದ್ದೇಶ:** ನಿಮ್ಮ ಅಗತ್ಯಗಳು ಯಾವುವು ಎಂದು ಗುರುತಿಸಿದರಷ್ಟೇ ಸಾಕಾಗುವುದಿಲ್ಲ. ನಿಮ್ಮ ಹಣಕಾಸಿನ ಉದ್ದೇಶಗಳು ಮತ್ತು ಅಗತ್ಯಗಳನ್ನು ವಿವರವಾಗಿ ಪರಿಶೀಲಿಸಿದಾಗ ಮಾತ್ರ ಹೆಚ್ಚಿನ ಪ್ರಭಾವವಿರುತ್ತದೆ. ಇವುಗಳಲ್ಲಿ ತಕ್ಷಣದ ಅಗತ್ಯಗಳು (ಪ್ರವಾಸ ಅಥವಾ ಡೌನ್ ಪೇಮೆಂಟ್‌ಗೆ ಉಳಿತಾಯ) ಮತ್ತು ಸುದೀರ್ಘಾವಧಿ ಅಗತ್ಯಗಳು (ನಿವೃತ್ತಿಗೆ ಯೋಜನೆ ಅಥವಾ ಮಕ್ಕಳ ಶಿಕ್ಷಣಕ್ಕೆ ಪಾವತಿ) ಸೇರಿರಬಹುದು.

ನಿಮ್ಮ ಮನಸ್ಸಿನಲ್ಲಿ ನಿರ್ದಿಷ್ಟವಾದ ಉದ್ದೇಶಗಳಿದ್ದರೆ ನಿಮ್ಮ ಹೂಡಿಕೆಯ ಅವಧಿ, ರಿಸ್ಕ್ ತಡೆದುಕೊಳ್ಳುವ ಮಟ್ಟ ಮತ್ತು ಅಗತ್ಯವಿರುವ ಆಸ್ತಿ ಹಂಚಿಕೆಯ ಕುರಿತು ನೀವು ಈಗ ಹೆಚ್ಚು ಕರಾರುವಕ್ಕಾಗಿ ನಿರ್ಧಾರ ಮಾಡಬಹುದು. ಉಳಿತಾಯದ ಫಂಡ್‌ಗಳ ಮೇಲೆ ಮಿತಿಯನ್ನು ಹೇರುವುದರಿಂದ ನೀವು ಹೂಡಿಕೆಗಳ ಬಗ್ಗೆ ಆದ್ಯತೆ ನೀಡಿದಂತಾಗುತ್ತದೆ ಮತ್ತು ಕೆಲವು ಕಾರ್ಡ್‌ಗಳನ್ನು ಮೇಲ್ದರ್ಜೆಗೆ ಏರಿಸುವುದು ಅಥವಾ ಅದ್ದೂರಿ ಹಾಲಿಡೇ ಆಚರಣೆಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ನಿಮ್ಮ ಹೂಡಿಕೆಗಳು ಯಾವತ್ತೂ ವಿಶೇಷವಾದ ಉದ್ದೇಶವನ್ನು ಹೊಂದಿರಬೇಕು ಮತ್ತು ಅದನ್ನು ಸಾಧಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.



ನಿಮ್ಮ ಹಣಕಾಸಿನ ವ್ಯವಸ್ಥೆಗಳನ್ನು ನಿಭಾಯಿಸಲು ರಚನಾತ್ಮಕ ಹಾಗೂ ಗುರಿಯನ್ನು ಆಧರಿಸಿದ ವಿಧಾನದಿಂದ ಸಾಕಷ್ಟು ಪ್ರಯೋಜನಗಳು ಹಾಗೂ ಅನುಕೂಲಗಳಿವೆ. ಜೊತೆಗೆ ಜೀವನದಲ್ಲಿ ನಿಮ್ಮ ಹಣಕಾಸು ಪಯಣದ ದಿಕ್ಕನ್ನೇ ಬದಲಿಸುವ ಭರವಸೆಯನ್ನು ನೀಡುತ್ತದೆ.

3. **ಸೂಕ್ತ ಸ್ಥಾನದ ಬಗ್ಗೆ ಗಮನ:** ನಿಮ್ಮ ಹೂಡಿಕೆಯ ಉದ್ದೇಶಗಳ ಬಗ್ಗೆ ಯಾವತ್ತೂ ಸ್ಪಷ್ಟತೆಯನ್ನು ಹೊಂದಿರುವುದು ನಿರ್ಣಾಯಕ. ಉತ್ಪನ್ನ ಅಥವಾ ಯೋಜನೆಯ ಆಯ್ಕೆಗಿಂತ ಅದು ಮುಖ್ಯವಾಗುತ್ತದೆ. ಮಾರುಕಟ್ಟೆಯಲ್ಲಿ ಏನಾಗುತ್ತಿದೆ ಅಥವಾ ಇತರರು ಏನು ಹೇಳುತ್ತಿದ್ದಾರೆ ಎನ್ನುವುದು ಮುಖ್ಯವಾಗುವುದಿಲ್ಲ. ನಿಜಕ್ಕೂ ಮುಖ್ಯವಾಗುವುದು ನೀವು ನಿಮ್ಮ ಗುರಿಯನ್ನು ಸಾಧಿಸುವ ಹಾದಿಯಲ್ಲಿ ಇದ್ದೀರೋ ಇಲ್ಲವೋ ಎನ್ನುವುದು. ಅದಷ್ಟೇ ಮುಖ್ಯ, ಉಳಿದದ್ದೆಲ್ಲವೂ ಸದ್ದು ಗದ್ದಲ. ಒಮ್ಮೆ ನೀವು ನಿಮ್ಮ ಹಣಕಾಸಿನ ಗುರಿಗಳನ್ನು ಪಟ್ಟಿಮಾಡಿಕೊಂಡ ಮೇಲೆ ಮತ್ತು ಯಾವುದು ಸೂಕ್ತವಾದುದು ಎಂಬುದರ ಮೇಲೆ ಗಮನ ಹರಿಸಿದ ಬಳಿಕ ನೀವು ತಪ್ಪುಗಳನ್ನು ಮಾಡುವುದು ಅಥವಾ ಅತಾರ್ಕಿಕವಾಗಿ ವರ್ತಿಸುವುದು ಅಥವಾ ನಿಮ್ಮ ನಡವಳಿಕೆಗಳು ನಿಮ್ಮ ಗುರಿಗಳ ಮೇಲೆ ಪರಿಣಾಮ ಬೀರುವುದು ತಪ್ಪುತ್ತದೆ. ನಿಮ್ಮ ಹೂಡಿಕೆಗಳನ್ನು ಹಿಂದಕ್ಕೆ ಪಡೆಯುವ ಮತ್ತು ಅನಗತ್ಯ ವೆಚ್ಚಗಳನ್ನು ಮಾಡುವ ತಪ್ಪುಗಳು ನಡೆಯುವುದಿಲ್ಲ. ನಿಜಕ್ಕೂ ಯಾವುದರ ಮೇಲೆ ಗಮನ ಹರಿಸಬೇಕು ಎಂಬುದು ನಿಮಗೆ ಗೊತ್ತಿರುತ್ತದೆ.
4. **ಕೋರ್ಸ್ ಕರೆಕ್ಷನ್:** ತಾನು ಮಾಡಿರುವ ಹೂಡಿಕೆಗಳು ಅಂದುಕೊಂಡಿರುವ ಮಾರ್ಗದಲ್ಲಿಯೇ ಇದೆಯೇ, ತನ್ನ ಹಣಕಾಸು ಗುರಿಗಳ ಕಡೆಗೆ ಹೊರಟಿದೆಯೇ ಎನ್ನುವುದನ್ನು ಆಗಾಗ ತಿಳಿದುಕೊಳ್ಳುತ್ತಿರಬೇಕು. ನಿಮ್ಮ ವೈಯಕ್ತಿಕ ಪರಿಸ್ಥಿತಿ ಅಥವಾ ಮಾರುಕಟ್ಟೆಯ ಗತಿಯ ಹಿನ್ನೆಲೆಯಲ್ಲಿ ನಿಮ್ಮ ಗುರಿಗಳಲ್ಲಿ ಯಾವುದೇ ಅಗತ್ಯ ಬದಲಾವಣೆಗಳನ್ನು ಮಾಡಬೇಕೇ ಎಂಬುದನ್ನು ಗಮನಿಸಬೇಕು. ಮಾರುಕಟ್ಟೆಯಲ್ಲಿ ಇಳಿಕೆ ಉಂಟಾದಾಗ ಹೂಡಿಕೆಗಳನ್ನು ಮಾಡಬೇಕು ಅಥವಾ ಮಾರುಕಟ್ಟೆ ಏರುಗತಿಯಲ್ಲಿದ್ದಾಗ ಆಸ್ತಿ ಹಂಚಿಕೆಯನ್ನು ಬದಲಿಸಬೇಕು ಎಂಬುದು ಇದರ ಇಂಗಿತವಾಗಿದೆ. ಆಗಾಗ ಇಂತಹ ಸಣ್ಣ ಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದರಿಂದ ನಿಮ್ಮ ಹಣಕಾಸು ಗುರಿಗಳನ್ನು ಸಾಧಿಸುವುದು ಸಾಧ್ಯವಾಗುತ್ತದೆ.
5. **ಹೂಡಿಕೆಯ ನಡವಳಿಕೆ ಮತ್ತು ಶಿಸ್ತು:** ಹೀಗೆ ಅಗತ್ಯವನ್ನು ಆಧರಿಸಿದ ಹೂಡಿಕೆಗಳು ಮತ್ತು ಹಣಕಾಸು ಯೋಜನೆಗಳನ್ನು ಮಾಡುವುದರಿಂದ ನಿಮ್ಮ ಇಡೀ ಹೂಡಿಕೆಯ ವಿಧಾನವೇ ಬದಲಾಗಿ ಹೋಗುತ್ತದೆ. ಇದರಿಂದ ಮಾರುಕಟ್ಟೆಯು ನಿಮ್ಮ ಪಾಲಿಗೆ ಭಿನ್ನವಾಗಿ ವರ್ತಿಸುವುದನ್ನು ಕಾಣುತ್ತೀರಿ ಮತ್ತು ಇದರ ಫಲ ಹಾಗೂ ಪರಿಣಾಮವನ್ನು ಇಂದು ಕಾಣುವುದಿಲ್ಲ ಬದಲಾಗಿ ದೂರದ ಭವಿಷ್ಯದಲ್ಲಿ ಕಾಣುತ್ತೀರಿ. ನಾವು ಕೈಗೊಳ್ಳುವ ಈ ನಿಲುವಿನಿಂದ ಉಂಟಾಗುವ ಬದಲಾವಣೆಯು ಭಯ, ಅತಿಯಾಸೆ ಅಥವಾ ಆಶಯವನ್ನು ಆಧರಿಸಿದ ಯಾವುದೇ ದುಡುಕಿನ ಮತ್ತು ಭಾವನಾತ್ಮಕ ನಿರ್ಧಾರ ಕೈಗೊಳ್ಳುವುದನ್ನು ಸ್ವಾಭಾವಿಕವಾಗಿಯೇ ನಿವಾರಣೆ ಮಾಡುತ್ತದೆ. ಇವೆಲ್ಲಕ್ಕೆ ಬದಲಾಗಿ ತಾರ್ಕಿಕ ಮತ್ತು ಸಂಶೋಧನೆ ಆಧಾರಿತ ನಿರ್ಧಾರಗಳನ್ನು ಕೈಗೊಳ್ಳಬೇಕು. ಬದಲಾಗುತ್ತಿರುವ ಕಾಲದೊಂದಿಗೆ ಹೂಡಿಕೆಯ ವಿಚಾರದಲ್ಲಿ ನೀವು ನಿಮ್ಮದೇ ಆದ ಶೈಲಿ, ನಿಯಮಗಳು ಹಾಗೂ ಸಿದ್ಧಾಂತಗಳನ್ನು ಅನುಸರಿಸಬೇಕು ಮತ್ತು ಒಬ್ಬ ಬುದ್ಧಿವಂತ ಹಾಗೂ ಅನುಭವಿ ಹೂಡಿಕೆದಾರರನಾಗಿ ರೂಪಾಂತರ ಹೊಂದಬೇಕು.
6. **ಭವಿಷ್ಯದ ಹಣಕಾಸು ಅಗತ್ಯಗಳನ್ನು ಸಾಧಿಸುವುದು:** ಗುರಿಗಳ ಬಗೆಗೆ ಸ್ಪಷ್ಟತೆ ಮತ್ತು ಅವುಗಳಿಗಾಗಿ ಉಳಿತಾಯ ಮಾಡುವುದು ಅದನ್ನು ಸಾಧಿಸಲು ಇರುವ ಅರ್ಹತೆಗಳಾಗಿವೆ. ಉಳಿತಾಯದ ಬಗೆಗೆ ನಿಮ್ಮಲ್ಲಿ ಸ್ಪಷ್ಟವಾದ ಮತ್ತು ಸಕ್ರಿಯವಾದ ಕಾರ್ಯತಂತ್ರ ಇಲ್ಲದೇ ಹೋದರೆ ನಿಮ್ಮ ಅಗತ್ಯಗಳು ಹಾಗೂ ಉದ್ದೇಶಗಳನ್ನು ಪೂರೈಸುವ ಸಾಧ್ಯತೆಗಳು ಕಡಿಮೆ. ಹಣಕಾಸಿನ ಸ್ಥಿರತೆ ಮತ್ತು ಯೋಗಕ್ಷೇಮದ ವೃತ್ತದಲ್ಲಿ ಇರುವ ಕೊನೆಯ ಲಿಂಕ್ ಏನೆಂದರೆ ಭವಿಷ್ಯದ ಹಣಕಾಸು ಉದ್ದೇಶಗಳನ್ನು ಸಾಧಿಸುವುದಾಗಿದೆ. ನೀವು ನಿಮಗಾಗಿ ನಿಗದಿಮಾಡಿಕೊಂಡ ಹಣಕಾಸು ಗುರಿಗಳನ್ನು ಸಾಧಿಸಲು ಬೇಕಾದ ಅಗತ್ಯ ಸವಲತ್ತುಗಳು ನಿಮ್ಮ ಬಳಿ ಇದೆ ಎನ್ನುವುದು ಅರಿವಾದರೆ ಹೆಚ್ಚು ಸುರಕ್ಷತೆಯ ಅನುಭವವಾಗುತ್ತದೆ. ಇದು ನಿಮ್ಮ ಪಾಲಿನ ಹೆಮ್ಮೆಯೂ ಹೌದು. ನಿಮ್ಮ ಕುಟುಂಬಕ್ಕಾಗಿರುವ ಇಂತಹ ಶಾಂತಿ ಮತ್ತು ತೃಪ್ತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ.

**ಬಾಟಮ್ ಲೈನ್:** ಒಟ್ಟಾರೆಯಾಗಿ ನಿಮ್ಮ ಉಳಿತಾಯಕ್ಕಾಗಿ ಅಗತ್ಯವನ್ನು ಆಧರಿಸಿದ ಹೂಡಿಕೆ ವಿಧಾನ ಅಥವಾ ಹಣಕಾಸು ಯೋಜನೆಯ ವಿಧಾನವೇ ನಿಜವಾದ ಹೂಡಿಕೆ. ನಿಮ್ಮ ಹಣಕಾಸಿನ ವ್ಯವಸ್ಥೆಗಳನ್ನು ನಿಭಾಯಿಸಲು ರಚನಾತ್ಮಕ ಹಾಗೂ ಗುರಿಯನ್ನು ಆಧರಿಸಿದ ವಿಧಾನದಿಂದ ಸಾಕಷ್ಟು ಪ್ರಯೋಜನಗಳು ಹಾಗೂ ಅನುಕೂಲಗಳಿವೆ. ಜೊತೆಗೆ ಜೀವನದಲ್ಲಿ ನಿಮ್ಮ ಹಣಕಾಸು ಪಯಣದ ದಿಕ್ಕನ್ನೇ ಬದಲಿಸುವ ಭರವಸೆಯನ್ನು ನೀಡುತ್ತದೆ. ಆದರೆ ಇವೆಲ್ಲವನ್ನೂ ಕೇವಲ ನಿಮ್ಮೊಬ್ಬರಿಂದ ನಿರ್ಧಾರ ಕೈಗೊಳ್ಳಲು ಸಾಧ್ಯವಾಗದೇ ಇರಬಹುದು. ಹಾಗಾಗಿ ಈ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ತಜ್ಞರ ಮಾರ್ಗದರ್ಶನವನ್ನು ಪಡೆದುಕೊಳ್ಳಲು ಹಣಕಾಸು ಉತ್ಪನ್ನಗಳ ವಿತರಕರು ಅಥವಾ ಸಲಹೆಗಾರರ ಜೊತೆ ಮಾತುಕತೆ ನಡೆಸುವುದು ಉತ್ತಮ.

# ವಿಮಾ ಪಾಲಿಸಿಗಳಲ್ಲಿ ಸಾಮಾನ್ಯ ದೂರುಗಳು




**ಕ್ಲೈಮ್ ತಿರಸ್ಕೃತಗೊಳ್ಳದಂತೆ ತಪ್ಪಿಸಲು ಪಾಲಿಸಿದಾರರು ವಿಮಾ ಯೋಜನೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವುದನ್ನು ಮರೆಯಬಾರದು. ಯಾವುದಕ್ಕೆಲ್ಲ ಸೌಲಭ್ಯಗಳು ಸಿಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.**

ಅನಿರೀಕ್ಷಿತವಾದ ವೈದ್ಯಕೀಯ ವೆಚ್ಚಗಳನ್ನು ನಿಭಾಯಿಸಲು ಜನರಿಗೆ ಹಾಗೂ ಕುಟುಂಬಗಳಿಗೆ ಲಭ್ಯವಾಗುವ ಅತ್ಯಂತ ನಿರ್ಣಾಯಕ ಹಾಗೂ ಸುರಕ್ಷಿತವಾದ ಜಾಲವೆಂದರೆ ಆರೋಗ್ಯ ವಿಮೆ. ಇದರ ಪ್ರಾಮುಖ್ಯತೆಯ ಹೊರತಾಗಿಯೂ ಆರೋಗ್ಯ ವಿಮೆ ಜಗತ್ತಿನಲ್ಲಿ ಈಗಲೂ ಅನೇಕ ದೂರುಗಳಿವೆ ಎನ್ನುವುದು ನಿಜ. ಅನೇಕ ಕಾರಣಗಳಿಗಾಗಿ ಪಾಲಿಸಿದಾರರು ಆಗಾಗ ಕಷ್ಟಗಳನ್ನು ಅನುಭವಿಸುತ್ತಾರೆ. ಇವುಗಳಲ್ಲಿ ಕವರೇಜ್ ವಿಷಯದಲ್ಲಿರುವ ನಿರ್ಬಂಧಗಳು, ಕ್ಲೈಮ್ ತಿರಸ್ಕೃತಗೊಳ್ಳುವುದು, ಪಾಲಿಸಿ ಇತ್ಯರ್ಥದಲ್ಲಿ ವಿಳಂಬ ಮತ್ತು ಸರಿಯಾದ ಗ್ರಾಹಕ ಸೇವೆಗಳು ಇಲ್ಲದೇ ಇರುವುದು ಸೇರಿವೆ.

ಪಾಲಿಸಿದಾರರ ನಿರೀಕ್ಷೆಗಳು ಮತ್ತು ವಿಮಾ ಸಂಸ್ಥೆಗಳು ಒದಗಿಸುವ ಸೇವೆಗಳ ನಡುವೆ ವ್ಯತ್ಯಯ ಉಂಟಾದಾಗ ಆರೋಗ್ಯ ವಿಮೆಗೆ ಸಂಬಂಧಿಸಿದ ದೂರುಗಳು ಕೇಳಿಬರುತ್ತವೆ. ಇಂತಹ ದೂರುಗಳು ಆರೋಗ್ಯ ವಿಮೆಯ ಮೂಲ ಉದ್ದೇಶವನ್ನೇ ಹಾಳುಗೆಡವಬಹುದು. ಬೆಂಬಲದ, ಸಹಾಯದ ತುರ್ತು ಅಗತ್ಯವಿದ್ದಾಗ ವ್ಯಕ್ತಿಗಳ ಮೇಲೆ ಹಣಕಾಸಿನ ಹೊರೆ ಮತ್ತು ಒತ್ತಡ ಉಂಟಾಗುತ್ತದೆ. ಒಟ್ಟಾರೆ ಆರೋಗ್ಯ ವಿಮೆ ಪಾಲಿಸಿಯ ವಿಚಾರದಲ್ಲಿ ಎಚ್ಚರಿಕೆ ಇಲ್ಲದೇ ಹೋದರೆ ಎದುರಿಸಬಹುದಾದ ಸಾಮಾನ್ಯ ಸವಾಲುಗಳು ಅಥವಾ ದೂರುಗಳು ಯಾವುವು ಎಂಬುದನ್ನು ಈ ಲೇಖನದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

1. **ತಪ್ಪು ಮಾರಾಟ:** ವಿಮಾ ಮಾರ್ಗದರ್ಶಕರು ಪಾಲಿಸಿದಾರರಿಗೆ ವಿಮಾ ಪಾಲಿಸಿಯ ವಿಶೇಷತೆಗಳು, ಅದರ ಲಾಭಗಳು ಅಥವಾ ನಿಯಮಗಳ ಬಗ್ಗೆ ಅಸಮರ್ಪಕವಾದ ಅಥವಾ ತಪ್ಪು ಮಾಹಿತಿಗಳನ್ನು ನೀಡಿದಾಗ ಇದನ್ನೇ ನಾವು ತಪ್ಪು ಮಾರಾಟ ಎಂದು ಕರೆಯುತ್ತೇವೆ. ಇದರ ಫಲವಾಗಿ ಪಾಲಿಸಿದಾರರು ತಮ್ಮ ಅಗತ್ಯಗಳಿಗೆ ಅನುಗುಣವಲ್ಲದ ಅಥವಾ ಅವರು ನಿರೀಕ್ಷಿಸುವ ಕವರೇಜ್ ಇಲ್ಲದ ಪಾಲಿಸಿಯನ್ನು ಖರೀದಿಸಬೇಕಾಗಿ ಬರಬಹುದು. ಹಾಗಾಗಿ ವಿಮಾ ಪಾಲಿಸಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಇಂತಹ ತಪ್ಪು ಮಾರಾಟದಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾದ ಅಗತ್ಯವಿರುತ್ತದೆ. ಹಾಗಾಗಿ ಖರೀದಿ ವಿಚಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೂ ಮುನ್ನ ಪಾಲಿಸಿಯ ನಿಬಂಧನೆಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು, ಮುದ್ರಣದಲ್ಲಿರುವ ಅಂಶಗಳನ್ನು ಸರಿಯಾಗಿ ಓದಿಕೊಳ್ಳುವುದು, ಅಗತ್ಯ ಪ್ರಶ್ನೆಗಳನ್ನು ಕೇಳುವುದು ಮತ್ತು ಇನ್ನೂ ಕೆಲವು ವಿಮಾ ಕಂಪನಿಗಳ ಜೊತೆ ಹೋಲಿಕೆ ಮಾಡುವುದು ಮುಖ್ಯ. ತಮ್ಮ ಅಗತ್ಯಗಳಿಗೆ ಮತ್ತು ಹಣಕಾಸು ಉದ್ದೇಶಗಳಿಗೆ ಅನುಗುಣವಾದ ವಿಮಾ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಮಾರುಕಟ್ಟೆಯಲ್ಲಿ ಈಗಾಗಲೇ ಉತ್ತಮ ಹೆಸರನ್ನು ಹೊಂದಿರುವ ಮತ್ತು ವಿಶ್ವಾಸಾರ್ಹ ಬ್ರೋಕರ್‌ಗಳಿಂದ ಮಾಹಿತಿ ಪಡೆಯುವುದನ್ನು ಮರೆಯಬಾರದು.
2. **ತಪ್ಪು ಪಾಲಿಸಿ ದಾಖಲೆಗಳು:** ಪಾಲಿಸಿದಾರರು ಪ್ರೀಮಿಯಂ ಪಾವತಿ ಮಾಡಿದ್ದು ಉದ್ದೇಶಿತ ಪಾಲಿಸಿ ಪ್ರತಿ ಬರದೇ ಇದ್ದಾಗ ಈ ದೂರುಗಳು ಕೇಳಿಬರುತ್ತವೆ. ಇದಕ್ಕೆ ಬದಲಾಗಿ ಅವರಿಗೆ ಪಾಲಿಸಿದಾರರ ಬಗ್ಗೆ ಕವರೇಜ್‌ನ ಅವಕಾಶ ಅಥವಾ ಪಾಲಿಯ ವಿಧದ ಬಗ್ಗೆ ಅಸಮರ್ಪಕ ಮಾಹಿತಿಯನ್ನು ಒಳಗೊಂಡ ಪಾಲಿಸಿ ದಾಖಲೆಗಳು ಬರಬಹುದು. ಇಂತಹ ಪರಿಸ್ಥಿತಿಯಲ್ಲಿ ಸೂಕ್ತವಾದ ಪಾಲಿಸಿ ದಾಖಲೆಗಳನ್ನು ಪಡೆದುಕೊಳ್ಳುವುದು ಅತ್ಯವಶ್ಯ. ಇದರಿಂದ ಪಾಲಿಸಿದಾರರ ವಿಮಾ ಕವರೇಜ್ ಬಗ್ಗೆ ಕರಾರುವಕ್ಕಾಗಿರಲು ಸಾಧ್ಯವಾಗುತ್ತದೆ.

   ಈ ಲೋಪವನ್ನು ಪರಿಹರಿಸಿಕೊಳ್ಳಲು ಪಾಲಿಸಿದಾರರು ವಿಮಾ ಸಲಹೆಗಾರರು ಅಥವಾ ವಿಮಾದಾರರ ಜೊತೆಗೆ ಮಾತುಕತೆ ನಡೆಸಬೇಕು. ಹಣ ಪಾವತಿ ಮತ್ತು ಸಮಸ್ಯೆಯ ಬಗ್ಗೆ ನಿರ್ಧರಿಸುವಲ್ಲಿ ಸಂಘಟನೆಯ ಜೊತೆಗೆ ಸಹಕರಿಸಲು ಅವರು ಪ್ರೀಮಿಯಂ ಪಾವತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ಒದಗಿಸಬೇಕು. ಪಾಲಿಸಿದಾರರು ಯಾವತ್ತೂ ತಮ್ಮ ವೈಯಕ್ತಿಕ ಮಾಹಿತಿಗಳ ಬಗೆಗೆ ಎರಡೆರಡು ಬಾರಿ ಪರಿಶೀಲನೆ ನಡೆಸಿರಬೇಕು. ಇದರಿಂದ ಇಂತಹ ಸಮಸ್ಯೆಗಳು ಉದ್ಭವಿಸದಂತೆ ತಡೆಯಬಹುದು. ಪ್ರೀಮಿಯಂ ಪಾವತಿ, ವಿಮೆಯನ್ನು ಒದಗಿಸುವವರ ಜೊತೆಗಿನ ಪತ್ರ ವ್ಯವಹಾರ ಹಾಗೂ ಪಾಲಿಸಿಯನ್ನು ಪಡೆದುಕೊಳ್ಳುವ ವಿಚಾರದಲ್ಲಿ ಇರುವ ಇತರ ಮಾಹಿತಿಗೆ ಸಂಬಂಧಿಸಿದಂತೆ ಸರಿಯಾದ ಟ್ರಾಕ್ ಹೊಂದಿರಬೇಕು.
3. **ಕ್ಲೈಮ್ ಅನುಮೋದನೆ ವಿಳಂಬ:** ಸಲ್ಲಿಕೆ ಮಾಡಲಾದ ಕ್ಲೈಮ್‌ನ್ನು ಪರಿಶೀಲಿಸಿ ಅನುಮೋದನೆ ನೀಡಲು ವಿಮಾದಾರರು ಅನಗತ್ಯವಾದ




ವಿಳಂಬಮಾಡಿದಾಗ ಈ ಸಮಸ್ಯೆ ಉಂಟಾಗುತ್ತದೆ. ಪಾಲಿಸಿದಾರರು ತಮ್ಮ ವೈದ್ಯಕೀಯ ವೆಚ್ಚದ ಬಿಲ್‌ಗಳು ಅಥವಾ ಇತರ ತುರ್ತು ಅಗತ್ಯಗಳನ್ನು ಭರಿಸಲು ಈ ಕ್ಲೈಮ್ ಮೊತ್ತವನ್ನು ಅವಲಂಬಿಸಿದ್ದರೆ ಇಂತಹ ವಿಳಂಬದಿಂದ ಹಣಕಾಸಿನ ಒತ್ತಡಕ್ಕೆ ಒಳಗಾಗಬಹುದು.

4. **ಕ್ಲೈಮ್ ತಿರಸ್ಕೃತಿ:** ಅನೇಕ ಕಾರಣಗಳನ್ನು ಮುಂದಿಟ್ಟುಕೊಂಡು ಕ್ಲೈಮ್‌ನ್ನು ವಿಮಾ ಸಂಸ್ಥೆಯು ತಿರಸ್ಕರಿಸಿದರೆ ಅದನ್ನು ಕ್ಲೈಮ್ ತಿರಸ್ಕೃತಿ ಎಂದು ಕರೆಯಲಾಗುತ್ತದೆ. ವಿಮಾ ಅರ್ಜಿಯ ಸಂದರ್ಭದಲ್ಲಿ ಸೂಕ್ತ ಮಾಹಿತಿಯನ್ನು ನೀಡದೇ ಇದ್ದ ಕಾರಣಕ್ಕೆ, ಪಾಲಿಸಿ ಅಗತ್ಯಗಳನ್ನು ಕ್ಲೈಮ್ ಪೂರೈಸದೇ ಇದ್ದಾಗ ಅಥವಾ ಕ್ಲೈಮ್ ಪಾಲಿಸಿಯ ವ್ಯಾಪ್ತಿಯಿಂದ ಹೊರಗಿದ್ದಾಗ ತಿರಸ್ಕೃತಗೊಳ್ಳಬಹುದು. ತಮ್ಮ ಕ್ಲೈಮ್‌ನ್ನು ಸ್ವೀಕರಿಸಲಾಗುತ್ತದೆ ಎಂದು ಪಾಲಿಸಿದಾರರು ಪ್ರಾಮಾಣಿಕವಾಗಿ ನಂಬಿಕೊಂಡಿದ್ದಾಗ ಅದು ತಿರಸ್ಕೃತಗೊಂಡರೆ ಬೇಸರಗೊಳ್ಳಬಹುದು, ತೊಂದರೆಗೆ ಒಳಗಾಗಬಹುದು.

ಕ್ಲೈಮ್ ತಿರಸ್ಕೃತಗೊಳ್ಳದಂತೆ ತಪ್ಪಿಸಲು ಪಾಲಿಸಿದಾರರು ವಿಮಾ ಯೋಜನೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡುವುದನ್ನು ಮರೆಯಬಾರದು. ಯಾವುದಕ್ಕೆಲ್ಲ ಸೌಲಭ್ಯಗಳು ಸಿಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲ ಅಗತ್ಯಗಳನ್ನು ಪೂರೈಸಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಪಾಲಿಸಿಗಾಗಿ ಅರ್ಜಿ ಸಲ್ಲಿಸುವ ಹಂತದಲ್ಲಿಯೇ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಪ್ರಾಮಾಣಿಕವಾಗಿ ಒದಗಿಸುವುದು ಮುಖ್ಯ. ನಿಮ್ಮ ಕ್ಲೈಮ್ ತಿರಸ್ಕತವಾದರೆ ವಿಮೆಯನ್ನು ಒದಗಿಸಿದ ಕಂಪನಿಯು ಅದಕ್ಕೆ ಸರಿಯಾದ ಕಾರಣವನ್ನು ತಿಳಿಸಬೇಕಾಗುತ್ತದೆ. ಅದರ ಜೊತೆಗೆ ನಿಮ್ಮ ಕ್ಲೈಮ್ ತಿರಸ್ಕಾರಗೊಂಡಿರುವುದಕ್ಕೆ ಕಾರಣವೇನು ಎಂಬುದನ್ನು ನೀವೂ ಕೂಡ ಪತ್ತೆ ಮಾಡಬಹುದಾಗಿದೆ. ಆದರೆ ವಿಮಾ ಸಂಸ್ಥೆಯು ಕ್ಲೈಮ್ ತಿರಸ್ಕೃತವಾಗಿರುವುದಕ್ಕೆ ಸಮರ್ಥನೆಯನ್ನು ನೀಡಬೇಕು ಎಂಬುದನ್ನು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDAI) ಕಡ್ಡಾಯಗೊಳಿಸಿದೆ.

**ದೂರು ಪರಿಹಾರ:** ಭಾರತದಲ್ಲಿ ಐಆರ್‌ಡಿಎಐ ವಿಮಾ ಉದ್ಯಮದ ನಿಯಂತ್ರಣ ಮಾಡುವ ಹಾಗೂ ಪಾಲಿಸಿದಾರರ ಹಕ್ಕುಗಳನ್ನು ರಕ್ಷಿಸುವ ಕೆಲಸವನ್ನು ಮಾಡುತ್ತದೆ. ಒಂದು ವೇಳೆ ಯಾವುದೇ ದೂರು ಅಥವಾ ಲೋಪಗಳು ಇದ್ದರೆ ಪಾಲಿಸಿದಾರರು ಮೊದಲು ಮಾಡಬೇಕಾದ ಕೆಲಸ ಏನೆಂದರೆ ಎಲ್ಲ ಸಂಬಂಧಪಟ್ಟ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆಯೇ, ಮಾಡುತ್ತಿರುವ ಕ್ಲೈಮ್ ಸೂಕ್ತವಾದುದೇ, ಅದಕ್ಕೆ ಪೂರಕವಾದ ದಾಖಲೆಗಳನ್ನು ಒದಗಿಸಬಹುದೇ ಎಂಬುದನ್ನು ಖಾತರಿ ಮಾಡಿಕೊಳ್ಳುವುದು. ಇವೆಲ್ಲದರ ಬಗ್ಗೆ ಮನವರಿಕೆಯಾದರೆ ಪಾಲಿಸಿದಾರರು ಆರಂಭದಲ್ಲಿ ಹೆಚ್ಚಿನ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನಕ್ಕಾಗಿ ವಿಮಾ ಸಲಹೆಗಾರರ ಜೊತೆ ಸಮಾಲೋಚನೆ ನಡೆಸಬಹುದು. ಪರಿಹಾರಕ್ಕಾಗಿ ಸಂಬಂಧಪಟ್ಟ ವಿಮಾ ಸಂಸ್ಥೆಯ ಗ್ರಾಹಕ ಸೇವೆ ಅಥವಾ ದೂರು ವಿಭಾಗವನ್ನು ಸಂಪರ್ಕಿಸಬಹುದು. ಸಾಮಾನ್ಯವಾಗಿ ಎಲ್ಲಾ ಸಾಮಾನ್ಯ ಹಾಗೂ ಪರಿಹರಿಸಬಹುದಾದ ದೂರುಗಳನ್ನು ಇಲ್ಲಿಯೇ ಪರಿಹರಿಸಿಕೊಳ್ಳಬಹುದು. ಆದರೆ ಕೆಲವು ಅಪರೂಪದ ಪ್ರಕರಣಗಳಲ್ಲಿ ದೂರಿಗೆ ಪರಿಹಾರ ದೊರೆಯದೇ ಹೋದಾಗ ಪಾಲಿಸಿದಾರರು ಹೆಚ್ಚುವರಿ ಬೆಂಬಲಕ್ಕಾಗಿ ಹಾಗೂ ಪ್ರಕರಣದ ಇತ್ಯರ್ಥಕ್ಕಾಗಿ ನಿಯಂತ್ರಣ ಪ್ರಾಧಿಕಾರ (IRDAI)ಕ್ಕೆ ಮನವಿಯನ್ನು ಸಲ್ಲಿಸಬಹುದು.

**ಬಾಟಮ್ ಲೈನ್:** ಎಲ್ಲ ನಿಯಮ, ನಿಬಂಧನೆಗಳನ್ನು ಪಾಲಿಸಿದರೆ, ಆ ಬಗ್ಗೆ ಅಧ್ಯಯನ ನಡೆಸಿ ಪಾಲಿಸಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಒದಗಿಸಿದರೆ, ಪಾಲಿಸಿಯ ವ್ಯಾಪ್ತಿಯಲ್ಲಿ ಇರುವ ಮತ್ತು ಇಲ್ಲದೇ ಇರುವ ಅಂಶಗಳನ್ನು ಗಮನಿಸಿದರೆ ಯಾವುದೇ ದೂರು ಸಲ್ಲಿಸಬೇಕಾದ ಸಾಧ್ಯತೆಗಳನ್ನು ಗಣನೀಯವಾಗಿ ತಗ್ಗಿಸಬಹುದು. ಮಾರುಕಟ್ಟೆಯಲ್ಲಿ ಇರುವ ವಿಶ್ವಾಸಾರ್ಹ ವಿಮಾ ಬ್ರೋಕರ್‌ಗಳ ಜೊತೆ ವ್ಯವಹಾರ ಮಾಡುವುದು ಹೆಚ್ಚು ಸಹಕಾರಿ. ಸರಿಯಾದ ಸಲಹೆಗಾರರು ಸೂಕ್ತವಾದ ಉತ್ಪನ್ನಗಳನ್ನು ಗುರುತಿಸುವಲ್ಲಿ ಸಹಾಯ ಮಾಡುತ್ತಾರೆ. ಅಂತಿಮವಾಗಿ ಒಂದು ವಿಮಾ ಪಾಲಿಸಿಯನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ನೀವು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಹಾಗೂ ಪಾಲಿಸಿಯನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ನಿರ್ಣಾಯಕ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN–79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

Mail: info@inspireindiafs.com

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಶಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD
@ 65, 'Surasa Enclave', 1st Floor, Puttanna Road,
Gandhi Bazar, Basavanagudi, Bengaluru-560004



ಹಕ್ಕುತ್ಯಾಗ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.